# 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

***ಎಸ್.ಸಿ. ನಂ. 96/2019***

PW.10
CW.8

ದಿನಾಂಕಃ 29-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಹೆಸರುಃ ಕೆ.ಜೆ.ಗೋವಿಂದರಾಜು
ತಂದೆಯ ಹೆಸರುಃ ಜಯಕೃಷ್ಣ
ವಯಸ್ಸುಃ 37 ವರ್ಷ
ವೃತ್ತಿಃ ವ್ಯಾಪಾರ
ವಾಸಸ್ಥಳಃ ಕುಣಿಗಲ್

**ಮುಖ್ಯ ವಿಚಾರಣೆಃ** ಸರ್ಕಾರಿ ಅಬಿಯೋಜಕರಿಂದ.

ಸಾಕ್ಷಿ ಮಹಜರ್ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ಮಹಜರನ್ನು ನಿಪಿ.39 ಸಾಕ್ಷಿಯ ಸಹಿಯನ್ನು ನಿಪಿ.39(ಎ) ಎಂದು ಗುರುತಿಸಲಾಯಿತು. ದಿನಾಂಕಃ 26-11-2018 ರಂದು ನಾನು ಮತ್ತು ನನ್ನ ಮಾಲೀಕರು ಕೆಲಸಕ್ಕೆ ಹೋಗುತ್ತಿದ್ದಾಗ ಕುಣಿಗಲ್ ಪೊಲೀಸ್ ಠಾಣೆಯ ಪೊಲೀಸರು ಠಾಣೆಗೆ ಬರುವಂತೆ ನನಗೆ ಫೋನ್ ಮಾಡಿದರು. ಬೆಳಿಗ್ಗೆ 9 ಗಂಟೆಗೆ ನಾನು ಠಾಣೆ ಬಳಿ ಹೋಗಿದ್ದೆ. ನಾನು ಠಾಣೆಗೆ ಹೋದಾಗ ಠಾಣೆಯಲ್ಲಿ 4 ಜನ ಹುಡುಗರು ಇದ್ದು ಪೊಲೀಸರು ನನ್ನ ಸಮಕ್ಷಮ ಅರೋಪಿ ಮನೋಜ್ ರವರ ಬಳಿಯಿಂದ 2 ಮೊಬೈಲ್, ಮಹೇಶನಿಂದ ಒಂದು ಮೊಬೈಲ್, ರಕ್ಷಿತ್ ಗೌಡರಿಂದ ಒಂದು ಮೊಬೈಲ್,

ಅಬಿಷೇಕ್ ರವರ ಬಳಿಯಿಂದ ಒಂದು ಮೊಬೈಲ್ ಮತ್ತು ಮನೋಜ್ ನ ಬಳಿಯಿಂದ 8200 ರೂಪಾಯಿ, ಮಹೇಶನಿಂದ 4300, ಅಬಿಷೇಕ್ ನಿಂದ 5200, ರಕ್ಷಿತ್ ಗೌಡರ ಕಡೆಯಿಂದ 4700 ರೂ ಹಣವನ್ನು ಅಮಾನತ್ತುಪಡಿಸಿಕೊಂಡರು. ಪ್ರತಿ ಮೊಬೈಲ್ ಹಾಗೂ ಹಣವನ್ನು ಪ್ರತ್ಯೇಕವಾಗಿ ಸೀಲ್ ಮಾಡಿ ಮೊಹರು ಮಾಡಿ ನನ್ನ ಸಹಿ ಪಡೆದರು. ಬೆಳಿಗ್ಗೆ 11 ಗಂಟೆ ಒಳಗೆ ಅಮಾನತ್ತು ಮಹಜರ್ ಕ್ರಮ ಪೂರ್ಣವಾಗಿತ್ತು

2. ಸಾಕ್ಷಿ ಮತ್ತೊಂದು ಮಹಜರ್ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ಮಹಜರ್ ನಿಪಿ.40 ಸಾಕ್ಷಿಯ ಸಹಿಯನ್ನು ನಿಪಿ.40(ಎ) ಎಂದು ಗುರುತಿಸಲಾಯಿತು. ಅದೇ ದಿನ ಪೊಲೀಸ್ ಠಾಣೆಯಲ್ಲಿ ನಾನು ಮೇಲೆ ಹೇಳಿದ ಹುಡುಗರು ಮತ್ತು ಅವರೊಂದಿಗೆ ಇನ್ನೂ 3-4 ಹಾಜರಿದ್ದರು. ಉಳಿದ 3-4 ಜನರ ಹೆಸರು ರಂಗಸ್ವಾಮಿ, ಕಿರಣ್ ಕುಮಾರ್ ಮತ್ತು ಪ್ರಮೋದ್. ಮೇಲೆ ಹೇಳಿದ ಮೂವರ ಬಳಿಯಿಂದ ತಲಾ ಒಂದೊಂದು ಮೊಬೈಲ್ ಒಬ್ಬನ ಬಳಿಯಿಂದ ಒಬ್ಬನ ಬಳಿಯಿಂದ 5300, ಮತ್ತೊಬ್ಬನ ಬಳಿಯಿಂದ 4750, ಇನ್ನೊಬ್ಬನ ಬಳಿಯಿಂದ 9100 ರೂ ಹಣವನ್ನು ಅಮಾನತ್ತುಪಡಿಸಿ ಪ್ರತ್ಯೇಕವಾಗಿ ಮೊಬೈಲ್ ಮತ್ತು ಹಣವನ್ನು ಸೀಲ್ ಮಾಡಿ ಅಮಾನತ್ತುಪಡಿಸಿದರು. ಬೆಳಿಗ್ಗೆ 11 ರಿಂದ ಮದ್ಯಾಹ್ನ 12 ಗಂಟೆವರೆಗೆ ಅಮಾತನ್ತು ಮಹಜರ್ ಕ್ರಮ ಅನುಸರಿಸಿದರು ಅದೇ ದಿನ ಪಂಚನಾಮೆಗೆ ಸಂಬಂದಿಸಿದಂತೆ ನನ್ನ ಹೇಳಿಕೆ ಪಡೆದಿದ್ದರು.

3. ಅಮಾನತ್ತುಪಡಿಸಿದ ಹಣದ ಬಗ್ಗೆ ಪೋಟೋ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಪೋಟೋ ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ.28 ರಿಂದ 31 ಎಂದು ಗುರುತಾಗಿರುತ್ತದೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 10 ಮೊಬೈಲ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ರಿಂದ 10 ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣೆಯಲ್ಲಿ ಒಟ್ಟು 8 ಮೊಬೈಲ್ ಗಳನ್ನು ಅರೋಪಿಗಳ ವಶದಿಂದ ಪಡೆದ ಬಗ್ಗೆ ಸಾಕ್ಷಿ ನುಡಿದಿದ್ದು ಉಳಿದ ಎರಡು ಮೊಬೈಲ್ ಗಳನ್ನೂ ಸಹ ಆ ದಿನ ಹಾಜರಿದ್ದ ಅರೋಪಿಗಳಿಂದ ಪೊಲೀಸರು ವಶಕ್ಕೆ ಪಡೆದಿದ್ದರು. ಆದರೆ ಸದರಿ ಅರೋಪಿಗಳ ಹೆಸರು ನನಗೆ ನಿಖರವಾಗಿ ಗೊತ್ತಿಲ್ಲದ ಕಾರಣ ನಾನು 8 ಮೊಬೈಲ್ ಗಳನ್ನು ಪೊಲೀಸರು ವಶಕ್ಕೆ ಪಡೆದ ಬಗ್ಗೆ ಸಾಕ್ಷಿ ನುಡಿದಿರುತ್ತೇನೆ ಎಂದು ಮುಂದುವರಿದು ನುಡಿಯುತ್ತಾರೆ. ಮು.ಮಾ.1 ರಿಂದ 10 ರ ಮೇಲೆ ಅಂಟಿಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ.1(ಎ), 2(ಎ), 3(ಎ), 4(ಎ), 5(ಎ), 6(ಎ), 7(ಎ), 8(ಎ), 9(ಎ), 10(ಎ) ಎಂದು ಗುರುತಿಸಲಾಯಿತು.

4. ಮೊಬೈಲ್ ಗಳನ್ನು ಪೊಲೀಸ್ ಠಾಣೆಯಲ್ಲಿ ಅಮಾತನ್ತುಪಡಿಸುವ ವೇಳೆ ನೋಡಿದ ಹುಡಗರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಒಬ್ಬ ಅರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಅರೋಪಿಗಳು ಗೈರು ಹಾಜರಾಗಿದ್ದು ಹಾಜರಾತಿಯಿಂದ ವಿನಾಯತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

**ಪಾಟೀ ಸವಾಲುಃ** ಅರೋಪಿಗಳ ಪರ ವಕೀಲರು ಕಾಲಾವಕಾಶ ಕೋರಿದ್ದು 250 ರೂ ಖರ್ಚಿನೊಂದಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.